# ಪುನರಾವರ್ತಿತ ಪ್ರಶ್ನೆಗಳು

1. **ಸುಕನ್ಯಾ ಸಮೃದ್ಧಿ ಖಾತೆ ಯಾರು ತೆರೆಯಬಹುದು ?**

   ಮುಂದಿನ ಜನ್ಮ ದಿನಕ್ಕೆ ಅನುಗುಣವಾಗಿ ೧೦ ವರ್ಷ ಒಳಗಿನ ಪ್ರಾಯದ ಹೆಣ್ಣು ಮಕ್ಕಳ ಹೆಸರಿನಲ್ಲಿ ಸುಕನ್ಯಾ ಖಾತೆ ತೆರೆಯಬಹುದು.

2. **ಅಪ್ರಾಪ್ತ ವಯಸ್ಸಿನ ಹೆಣ್ಣು ಮಗುವಿನ ಹೆಸರಲ್ಲಿ ಯಾರು ಖಾತೆ ತೆರೆಯಬಹುದು ?**

   ಹೆಣ್ಣು ಮಗುವಿನ ಪೋಷಕರು ಅಂದರೆ – ತಂದೆ / ತಾಯಿ / ಕಾನೂನು ರೀತ್ಯಾ ಪೋಷಕರು ಹೆಣ್ಣು ಮಗುವಿನ ಹೆಸರಲ್ಲಿ ಖಾತೆಯನ್ನು ತೆರೆದು ನಿರ್ವಹಿಸಬಹುದು.

3. **ಒಂದು ಹೆಣ್ಣು ಮಗುವಿನ ಹೆಸರಲ್ಲಿ ಎಷ್ಟು ಸುಕನ್ಯಾ ಸಮೃದ್ಧಿ ಖಾತೆಗಳನ್ನು ತೆರೆಯಬಹುದು. ?**

   ಒಂದು ಹೆಣ್ಣು ಮಗುವಿನ ಹೆಸರಲ್ಲಿ ಒಂದು ಖಾತೆ ಮಾತ್ರಾ ತೆರೆಯಬಹುದಾಗಿದೆ.

4. **ಒಂದು ಕುಟುಂಬದಲ್ಲಿ ಎಷ್ಟು ಹೆಣ್ಣು ಮಕ್ಕಳು ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಅರ್ಹರು?**

   ಒಂದು ಕುಟುಂಬದಲ್ಲಿ ಎರಡು ಹೆಣ್ಣು ಮಕ್ಕಳು ಮಾತ್ರ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಅರ್ಹರು.

5. **ಈಗಾಗಲೇ ಕುಟುಂಬದ ಒಂದು ಹೆಣ್ಣು ಮಗುವಿನ ಹೆಸರಲ್ಲಿ ಸುಕನ್ಯಾ ಸಮೃದ್ಧಿ ಖಾತೆ ಇದ್ದು ಎರಡನೇ ಹೆರಿಗೆ ಅವಳಿ ಹೆಣ್ಣು ಮಕ್ಕಳಾದರೆ ಆ ಎರಡು ಹೆಣ್ಣು ಮಕ್ಕಳು ಸುಕನ್ಯ ಸಮೃದ್ಧಿ ಖಾತೆ ತೆರೆಯಲು ಅರ್ಹರಾಗುತ್ತಾರೆಯೇ?**

   ಹೌದು.

6. **ಮೊದಲನೇ ಹೆರಿಗೆಯಲ್ಲಿ ತ್ರಿವಳಿ ಅಂದರೆ ಮೂರು ಹೆಣ್ಣು ಮಕ್ಕಳು ಜನಿಸಿದರೆ ಆ ಮೂರೂ ಹೆಣ್ಣು ಮಕ್ಕಳು ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಅರ್ಹರಾಗುತ್ತಾರೆಯೇ?**

   ಹೌದು.

7. **ಕರ್ನಾಟಕ ಸರಕಾರದ ಭಾಗ್ಯಲಕ್ಷ್ಮೀ ಯೋಜನೆಯಡಿ ತೆರೆಯಲಾಗುವ ಸುಕನ್ಯ ಸಮೃದ್ಧಿ ಖಾತೆಯ ವಿಶೇಷಗಳೇನು ?**

   ಭಾರತ ಸರಕಾರದ ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಖಾತೆಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ಇಲ್ಲಿ ಅನ್ವಯವಾಗುತ್ತದೆ.

8. **ಕರ್ನಾಟಕ ಸರಕಾರದ ಭಾಗ್ಯಲಕ್ಷ್ಮೀ ಯೋಜನೆಯಡಿ ತೆರೆಯಲಾಗುವ ಸುಕನ್ಯ ಸಮೃದ್ಧಿ ಖಾತೆಯಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಎಷ್ಟು ಹಣ ಜಮಾ ಮಾಡುತ್ತದೆ ?**

   ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರಕಾರ ಹಾಗೂ ಅಂಚೆ ಇಲಾಖೆಯ ನಡುವೆ ಒಪ್ಪಂದದ ಪ್ರಕಾರ ಕರ್ನಾಟಕ ಸರಕಾರ ಖಾತೆ ತೆರೆಯುವ ಸಂಧರ್ಭದಲ್ಲಿ ಮಾಡುವ ಜಮಾ ಸೇರಿ ಒಟ್ಟು ೧೫ ವರ್ಷ ರೂ. 3000/- ರಂತೆ ಹಣ ಜಮಾ ಮಾಡಲಿದೆ.

9. **ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿ ಹೆಣ್ಣು ಮಗುವಿನ ಹೆಸರಲ್ಲಿ ಸರಕಾರದಿಂದ ಮಂಜೂರಾದ ಸುಕನ್ಯ ಸಮೃದ್ಧಿ ಖಾತೆಯನ್ನು ಹೊರತು ಪಡಿಸಿ ಇನ್ನೊಂದು ಹೊಸ ಖಾತೆಯನ್ನು ತೆರೆಯಬಹುದೇ?**

   ಖಂಡಿತವಾಗಿ ಇಲ್ಲ. ಒಂದು ಹೆಣ್ಣು ಮಗುವಿನ ಹೆಸರಲ್ಲಿ ಒಂದೇ ಸುಕನ್ಯಾ ಸಮೃದ್ಧಿ ಖಾತೆ ಇರಬಹುದು.

10. **ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿ ಹೆಣ್ಣು ಮಗುವಿನ ಹೆಸರಲ್ಲಿ ಸರಕಾರದಿಂದ ಮಂಜೂರಾದ ಸುಕನ್ಯ ಸಮೃದ್ಧಿ ಖಾತೆ ತೆರೆಯುವ ಮೊದಲೇ ವೈಯಕ್ತಿಕ ಸುಕನ್ಯಾ ಸಮೃದ್ಧಿ ಖಾತೆ ಹೊಂದಿದ್ದರೆ ಏನು ಮಾಡಬೇಕು ?**

ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಯೋಜನೆಯಡಿ ಒಂದು ಹೆಣ್ಣು ಮಗುವಿನ ಹೆಸರಲ್ಲಿ ಒಂದೇ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಅವಕಾಶ ಇದ್ದು ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆದ ಖಾತೆಯನ್ನು ಕ್ರಮವಲ್ಲದ ಖಾತೆ ಎಂದು ಗುರುತಿಸಿ ಸದರೀ ಖಾತೆಯನ್ನು ಕೂಡಲೇ ಮುಕ್ತಾಯಗೊಳಿಸಬೇಕು. ಭಾಗ್ಯಲಕ್ಷ್ಮೀ ಸುಕನ್ಯಾ ಖಾತೆಯ ಪಾಸ್ ಪುಸ್ತಕವನ್ನು ಕೂಡಲೇ ರಾಜ್ಯ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಬಂದಿಸಿದ ಅಧಿಕಾರಿಗೆ ಖಾತೆಯನ್ನು ಬಡ್ಡಿ ರಹಿತವಾಗಿ ಮುಕ್ತಾಯ ಗೊಳಿಸುವ ಅರ್ಜಿಯೊಂದಿಗೆ ಒಪ್ಪಿಸತಕ್ಕದ್ದು. ಹಾಗೂ ಸದರಿ ಖಾತೆ ಯಾವುದೇ ಬಡ್ಡಿಗೆ ಅರ್ಹವಾಗಿರುವುದಿಲ್ಲ.

11. **ಭಾಗ್ಯಲಕ್ಷ್ಮೀ ಯೋಜನೆಯಡಿ ಸರಕಾರದಿಂದ ಮಂಜೂರಾದ ಸುಕನ್ಯಾ ಸಮೃದ್ಧಿ ಖಾತೆ ತೆರೆದ ದಿನಾಂಕದ ನಂತರ ವೈಯಕ್ತಿಕವಾಗಿ ಸುಕನ್ಯಾ ಸಮೃದ್ಧಿ ಖಾತೆ ತೆರೆದಿದ್ದಾರೆ ಏನು ಕ್ರಮ ಕೈಗೊಳ್ಳಬೇಕು ?**

ವೈಯಕ್ತಿಕವಾಗಿ ಸುಕನ್ಯ ಸಮೃದ್ಧಿ ಖಾತೆ ಭಾಗ್ಯಲಕ್ಷ್ಮಿ ಸುಕನ್ಯ ಸಮೃದ್ಧಿ ಖಾತೆಯ ನಂತರ ತೆರೆದ ಖಾತೆಯಾದ್ದರಿಂದ ಕ್ರಮವಲ್ಲದ ಖಾತೆ ಎಂದು ಪರಿಗಣಿಸಲಾಗುವುದು. ಈ ಖಾತೆಯನ್ನ ಕೂಡಲೇ ಬಡ್ಡಿ ರಹಿತವಾಗಿ ಮುಕ್ತಾಯಗೊಳಿಸಲು ಸದರಿ ಖಾತೆ ತೆರದ ಅಂಚೆ ಕಚೇರಿಯಲ್ಲಿಯೇ ಅರ್ಜಿ ಸಲ್ಲಿಸಿ ಮುಕ್ತಾಯ ಗೊಳಿಸತಕ್ಕದ್ದು ಹಾಗೂ ಅದರ ವಿವರಗಳನ್ನು ಸಂಬಂದಿಸಿದ ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಯ ಗಮನಕ್ಕೆ ತರತಕ್ಕದ್ದು.

12. **ಈಗಾಗಲೇ ಹೊಂದಿರುವ ಖಾತೆ ಮುಕ್ತಾಯಗೊಳಿಸದೇ ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು ?**

ಕ್ರಮವಲ್ಲದ ಖಾತೆ ಎಂದು ಗುರುತಿಸಲಾದ ಸುಕನ್ಯ ಸುಮೃದ್ಧಿ ಖಾತೆಗೆ ಸಂಬಂದಿಸಿದಂತೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

13. **ವೈಯಕ್ತಿಕವಾಗಿ ತೆರೆದ ಕ್ರಮ ಬಾಹಿರ ಖಾತೆ ಮುಕ್ತಾಯಗೊಳ್ಳುವಾಗ ಪಾವತಿ ಪಡೆದ ಹಣವನ್ನು ಭಾಗ್ಯಲಕ್ಶ್ಮೀ – ಸುಕನ್ಯಾ ಸಮೃದ್ಧಿ ಖಾತೆಗೆ ಜಮಾ ಮಾಡಬಹುದೇ ?**

ಕ್ರಮಾಂಕ ೧೧ ರಲ್ಲಿ ತಿಳಿಸಿದಂತೆ ಅರ್ಜಿಯನ್ನು ಭರ್ತಿ ಮಾಡುವಾಗ ಅದರ ಹಣವನ್ನು ಭಾಗ್ಯಲಕ್ಶ್ಮೀ – ಸುಕನ್ಯಾ ಸಮೃದ್ಧಿ ಖಾತೆಗೆ ಜಮಾ ಮಾಡಲು ವಿನಂತಿಸಿದಲ್ಲಿ ಆ ಹಣವನ್ನು ಖಾತೆ ಮುಕ್ತಾಯಗೊಳಿಸುವ ದಿನಾಂಕದಂದು ಸದರಿ ಖಾತೆಗೆ ಜಮಾ ಮಾಡಲಾಗುವುದು.

14. **ಭಾಗ್ಯಲಕ್ಶ್ಮೀ – ಸುಕನ್ಯಾ ಸಮೃದ್ಧಿ ಖಾತೆಗೆ ವೈಯಕ್ತಿಕವಾಗಿ ಹಣ ಜಮಾ ಮಾಡಬಹುದೇ?**

ಕರ್ನಾಟಕ ಸರಕಾರ ಜಮಾ ಮಾಡುವ ವಾರ್ಷಿಕ ರೂ.೩೦೦೦/- ದೊಂದಿಗೆ ವೈಯಕ್ತಿಕವಾಗಿ ಸಹಾ ಹಣ ಜಮಾ ಮಾಡಬಹುದು. ಕನಿಷ್ಟ ಜಮಾ ಹಣ ರೂ. ೫೦/- ಆಗಿದ್ದು ಹಣವನ್ನು ರೂ.೫೦ ರ ಅಪವರ್ತನದಲ್ಲಿ ಕಟ್ಟಬಹುದು ವಾರ್ಷಿಕ ಜಮಾ ಮೊತ್ತ ರೂ.೧,೫೦,೦೦೦/- ದಾಟಬಾರದು. ಹಣವನ್ನು ಯಾವಾಗ ಬೇಕಾದರೂ ವರ್ಷದಲ್ಲಿ ಎಷ್ಟು ಬಾರಿಯಾದರೂ ಕಟ್ಟಬಹುದು.

15. **ಯಾವ ಅಂಚೆ ಕಚೇರಿಯಲ್ಲಿ ಭಾಗ್ಯಲಕ್ಷ್ಮೀ – ಸುಕನ್ಯಾ ಸಮೃದ್ಧಿ ಖಾತೆಗೆ ವೈಯಕ್ತಿಕ ಹಣ ಜಮಾ ಮಾಡಬಹುದು ?**

ನಿಮ್ಮ ಸಮೀಪದ ಉಪ ಅಂಚೆ ಕಚೇರಿ / ಪ್ರಧಾನ ಅ0ಚೆ ಕಚೇರಿಯಲ್ಲಿ ಹಣ ಜಮಾ ಮಾಡಬಹುದು. ಆದರೆ ಶಾಖಾ ಅಂಚೆ ಕಚೇರಿಗಳಲ್ಲಿ ಜಮಾ ಮಾಡಲು ಆಗುವುದಿಲ್ಲ